ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಮಡಿಕೇರಿ

ಸಿ.ಸಿ.ಸಂಖ್ಯೆ:1057/2024

ಪಿರ್ಯಾದಿಃ ರಾಜ್ಯದ ಪರವಾಗಿ
ಮಡಿಕೇರಿ ಗ್ರಾಮಾಂತರ ಆರಕ್ಷಕ ಠಾಣೆ

ವಿರುದ್ಧ

ಆರೋಪಿ/ಗಳುಃ ಮನು ವೈ.ಜಿ.,

**ದೋಷಾರೋಪಣೆ**

ಶ್ರೀಮತಿ ವಿನುತ ಡಿ.ಎಸ್. ಬಿ.ಎಸ್.ಸಿ. (ಸೆರಿಕಲ್ಚರ್), ಎಲ್.ಎಲ್.ಬಿ., ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ಮಡಿಕೇರಿ ಆದ ನಾನು ಆರೋಪಿಯಾದ

ಮನು ವೈ.ಜಿ.,
ಪ್ರಾಯ 26 ವರ್ಷ,
ತಂದೆಃ ಗಂಗಾಧರ್,
ವಾಸಃ ಯರೆಗೌಡನಹಳ್ಳಿ ಗ್ರಾಮ,
ಪಾಂಡವಪುರ ತಾಲ್ಲೂಕು,
ಮೈಸೂರು ಜಿಲ್ಲೆ.

ನಿಮ್ಮ ವಿರುದ್ಧ ರೂಪಿಸಿರುವ ದೋಷಾರೋಪಣೆ ಏನೆಂದರೆ,

ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿನ ಕಡಗದಾಳು ಗ್ರಾಮದಲ್ಲಿ ವಾಸವಿರುವ ಚಾಸಾ-1 ಪ್ರಿಯಂವದಾ ಎಂಬುವವರು ಕಿರ್ಲೋಸ್ಕರ್ ಕಂಪನಿಯ ಜನರೇಟರನ್ನು ಉಪಯೋಗಿಸುತ್ತಿದ್ದು, ಸದರಿ ಜನರೇಟರಿನ ರಿಪೇರಿ ಕೆಲಸವನ್ನು ಕುಶಾಲನಗರದ ಸಾಗರ್ ಎಂಬುವವರು ಮಾಡಿಕೊಡುತ್ತಿದ್ದು, ದಿನಾಂಕಃ04.06.2023 ರಂದು ಸಮಯ ಮಧ್ಯಾಹ್ನ 12.00 ಗಂಟೆಗೆ 7483346964 ರ ಮೊಬೈಲಿನಿಂದ ಚಾಸಾ-1 ರವರ ಮೊಬೈಲ್ ಸಂಖ್ಯೆ9900164670 ನಂಬರಿಗೆ ಸಾಗರ್ ಎಂಬುದಾಗಿ ಆರೋಪಿಯಾದ ನೀವು ಬೇರೆಯವರಂತೆ ನಟಿಸಿ ಮಾತನಾಡಿದ್ದು, ಆ ಮೂಲಕ ಆರೋಪಿಯಾದ ನೀವು ಕಲಂ 419 ಭಾ.ದಂ.ಸಂ. ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ, ಅದೇ ದಿನ, ಅದೇ ಸಮಯ ದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಆರೋಪಿಯಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ, "ನಿಮಗೆ ಬೇಕಾದ ಜನರೇಟರ್ ನನ್ನಲ್ಲಿಯೇ ಇದೆ. ಅದನ್ನು ನಿಮಗೆ ಕೊಟ್ಟು 3 ಕೆವಿ ಜನರೇಟನ್ನು ತಾನು ತೆಗೆದುಕೊಂಡು ಹೋಗುತ್ತೇನೆ" ಎಂದು ಹೇಳಿ, ಮೋಸದಿಂದ ರೂ.22,000/- ಗಳನ್ನು ನೀವು ನೀಡುವ ನಂಬರಿಗೆ ಗೂಗಲ್ ಪೇ ಮಾಡಿ ಎಂಬುದಾಗಿ ತಿಳಿಸಿದ ಮೇರೆಗೆ ಚಾಸಾ-1 ರವರು ಲಕ್ಷ್ಮೀಆಚಾರ್ಯ ಎಂಬ ಹೆಸರಿಗೆ ಹಣವನ್ನು ಗೂಗಲ್ ಪೇ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಚಾಸಾ-1 ರವರನ್ನು ವಂಚನೆ ಮಾಡಿ ಕಲಂ 420 ಭಾ.ದಂ.ಸಂ. ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೂರನೇಯದಾಗಿ, ಅದೇ ದಿನ, ಅದೇ ಸಮಯ ದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಚಾಸಾ-1 ರವರು ವಹಿಳೆಯಾಗಿದ್ದು ಅವರನ್ನು ದೂರವಾಣಿಯ ಮೂಲಕ ಮೇಲ್ಕಂಡಂತೆ ವಂಚನೆ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಕಲಂ 66(ಸಿ) ಐ.ಟಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಅದೇ ದಿನ, ಅದೇ ಸಮಯದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಚಾಸಾ-1 ರವರನ್ನು ಮೇಲ್ಕಂಡ ರೀತಿಯಲ್ಲಿ ವಂಚಿಸಲು ಸಾಮಾಜಿಕ ಜಾಲತಾಣದ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ವಂಚನೆ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಕಲಂ 66(ಸಿ) ಐ.ಟಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಅದೇ ದಿನ, ಅದೇ ಸಮಯದಲ್ಲಿ ಮೇಲ್ಕಂಡ ಕೃತ್ಯವನ್ನು ಮುಂದುವರೆಸುತ್ತಾ, ಆರೋಪಿಯಾದ ನೀವು ಚಾಸಾ-1 ರವರಿಗೆ ಜನರೇಟನ್ನು ಸರಬರಾಜು ಮಾಡುವಂತೆ ನಂಬಿಸಿ ಮೋಸದಿಂದ ರೂ.22,000/- ಗಳನ್ನು ಲಕ್ಷ್ಮೀಆಚಾರ್ಯ ಎಂಬ ಹೆಸರಿಗೆ ಚಾಸಾ-1 ರವರಿಂದ ಮೋಸದಿಂದ ಗೂಗಲ್ ಪೇ ಮಾಡಿಸಿಕೊಂಡು ಚಾಸಾ-1 ರವರನ್ನು ಸಾಮಾಜಿಕ ಜಾಲತಾಣದ ಮಾಹಿತಿ ತಂತ್ರಜ್ಞಾನವನ್ನು ಉಪಯೋಗಿಸಿ ಬೇರೆಯವರಂತೆ ನಟಿಸಿ ಮಾತನಾಡಿ ವಂಚನೆ ಮಾಡಿದ್ದು, ಆ ಮೂಲಕ ಆರೋಪಿಯಾದ ನೀವು ಕಲಂ 66(ಡಿ) ಐ.ಟಿ ಆಕ್ಟ್ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಆಪಾದನೆಯು ಆರೋಪಿಯಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

17/11/25

ದಿನಾಂಕ **17.11.2025**

ಪ್ರಧಾನ ಸಿವಿಲ್ ಜಡ್ಜ್ ಮತ್ತು
ಜೆ.ಎಮ್.ಎಫ್.ಸಿ., ಮಡಿಕೇರಿ.